# ಕರ್ನಾಟಕ ಸರ್ಕಾರದ ನಡಾವಳಿಗಳು

ವಿಷಯ : M/s FPEL Trizone Solar Private Limited ಕಂಪನಿಗೆ ಗದಗ ಜಿಲ್ಲೆ, ರೋಣ ತಾಲ್ಲೂಕಿನ ವಿವಿಧ ಗ್ರಾಮಗಳಲ್ಲಿ 148.5 ಮೆ.ವ್ಯಾ. ಸಾಮರ್ಥ್ಯದ ಪವನ ವಿದ್ಯುತ್ ಯೋಜನೆಯನ್ನು ಹಂಚಿಕೆ ಮಾಡುವ ಕುರಿತು.

**ಓದಲಾಗಿದೆ :**

1) ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ನವೀಕರಿಸಬಹುದಾದ ಇಂಧನ ಅಭಿವೃದ್ಧಿ ನಿಯಮಿತ ಇವರ ಪತ್ರ ಸಂಖ್ಯೆ:KREDL/ 08/FPEL – 148.5 MW/Gadag/F-09/2023/0823, ದಿನಾಂಕ: 13.03.2023.
2) ದಿನಾಂಕ:14.03.2023 ರಂದು ನಡೆದ ಹಂಚಿಕೆ ಸಮಿತಿ ಸಭೆಯ ನಡಾವಳಿ.
3) ಮಾನ್ಯ ಉಚ್ಚ ನ್ಯಾಯಾಲಯದ ರಿಟ್ ಅರ್ಜಿ ಸಂಖ್ಯೆ:15113/2022 (GM-RES)

**ಪ್ರಸ್ತಾವನೆ :-**

ಮೇಲೆ ಓದಲಾದ ಕ್ರ.ಸಂ. (1)ರ ಪತ್ರದಲ್ಲಿ ವ್ಯವಸ್ಥಾಪಕ ನಿರ್ದೇಶಕರು, ಕೆ.ಆರ್.ಇ.ಡಿ.ಎಲ್. ಇವರು ಸರ್ಕಾರಕ್ಕೆ ಸಲ್ಲಿಸಿರುವ ಪ್ರಸ್ತಾವನೆಯಲ್ಲಿ M/s FPEL Trizone Solar Private Limited ಕಂಪನಿಯು ಗದಗ ಜಿಲ್ಲೆಯ ರೋಣ ತಾಲ್ಲೂಕಿನ ಕರ್ಮಾಟಿ, ಅಸೂತಿಮ ಸೋಮನಕಟ್ಟಿ, ಕೌಜಗೇರಿ, ಹಿರೇಮನ್ನೂರು, ಬೆಲವಂಕಿ, ಡೆತ್‌ನಾಲ್, ಯಾವಗಲ, ಹೊನ್ನಾಪುರ ಮತ್ತು ಬಾಲಗನ್ನೂರು ಗ್ರಾಮಗಳಲ್ಲಿ 148.5 ಮೆ.ವ್ಯಾ. ಪವನ ವಿದ್ಯುತ್ ಯೋಜನೆಯ ಕುರಿತು ವಿಸ್ತೃತ ಯೋಜನಾ ವರದಿಯನ್ನು ತಯಾರಿಸಿ, ಕೆ.ಆರ್.ಇ.ಡಿ.ಎಲ್.ಗೆ ಸಲ್ಲಿಸಿರುವುದಾಗಿ ಹಾಗೂ ಸದರಿ ಯೋಜನೆಯಿಂದ ಉತ್ಪಾದನೆಯಾಗುವ ವಿದ್ಯುತ್‌ನ್ನು Proposed Gadag CTU ವಿದ್ಯುತ್ ಪ್ರಸರಣ ಜಾಲಕ್ಕೆ ಜೋಡಿಸಿ, ಹೊರ ರಾಜ್ಯಗಳಿಗೆ SECI ಬಿಡ್ಡಿಂಗ್/ ಮೂರನೇ ವ್ಯಕ್ತಿಗೆ Inter State Transmission System (ISTS) ಮುಖಾಂತರ ವಿದ್ಯುತ್ ಸರಬರಾಜು ಮಾಡುವ ವರ್ಗದಡಿ ಪ್ರತಿ ವಿಂಡ್ ಟರ್ಬೈನ್ ಗೆ 10 ಎಕರೆಯಂತೆ Footprint basis ಲೆಕ್ಕೀಕರಿಸಿ, ಜಮೀನುಗಳನ್ನು ಉಪಯೋಗಿಸುವುದು ಮತ್ತು ಪವನ ವಿದ್ಯುತ್ ಘಟಕಗಳ ಅಂತರವನ್ನು MNRE ಸುತ್ತೋಲೆ/ಮಾರ್ಗಸೂಚಿಯಂತೆ ಅಳವಡಿಸುವಂತೆ ಷರತ್ತುಗಳನ್ನು ವಿಧಿಸಿ, ಹಂಚಿಕೆ ನೀಡುವಂತೆ ಕೋರಿರುವುದಾಗಿ ತಿಳಿಸಿರುತ್ತಾರೆ.

M/s FPEL Trizone Solar Private Limited ಇವರು ಹಂಚಿಕೆಗಾಗಿ ಕೋರಿರುವ ಸ್ಥಳವು ಈ ಹಿಂದೆ M/s Vish Wind Infrastrukture LLP ಕಂಪನಿಯ 6.4 ಮೆ.ವ್ಯಾ. (8 ಸಂಖ್ಯೆಯ 0.8 ಮೆ.ವ್ಯಾ. ಸಾಮರ್ಥ್ಯದ ವಿಂಡ್ ಟರ್ಬೈನ್) ಮತ್ತು 50 ಮೆ.ವ್ಯಾ. (62 ಸಂಖ್ಯೆಯ 0.8 ಮೆ.ವ್ಯಾ. ಸಾಮರ್ಥ್ಯದ ವಿಂಡ್ ಟರ್ಬೈನ್) ಹಂಚಿಕೆ ಪಡೆದಿರುವ ಪ್ರದೇಶದಲ್ಲಿ ಬರುತ್ತದೆ. M/s Vish Wind Infrastrukture LLP ಕಂಪನಿಯ 6.4 ಮೆ.ವ್ಯಾ. ಸಾಮರ್ಥ್ಯದ ಯೋಜನೆಗೆ ದಿನಾಂಕ:10.05.2026ರವರೆಗೆ ಮತ್ತು 50 ಮೆ.ವ್ಯಾ. ಸಾಮರ್ಥ್ಯದ ಯೋಜನೆಗೆ ದಿನಾಂಕ:07.05.2026ರವರೆಗೆ ಅನುಷ್ಠಾನಗೊಳಿಸಲು ಕಾಲಾವಕಾಶವಿರುತ್ತದೆ. M/s Vish Wind Infrastrukture LLP ಕಂಪನಿಯ 6.4 ಮೆ.ವ್ಯಾ. ಸಾಮರ್ಥ್ಯದ ಯೋಜನೆಗೆ 24000 ಎಕರೆ ಮತ್ತು 50 ಮೆ.ವ್ಯಾ. ಸಾಮರ್ಥ್ಯದ ಯೋಜನೆಗೆ 40800 ಎಕರೆಯಷ್ಟು ಪ್ರದೇಶವನ್ನು Topo Map ಸಂಖ್ಯೆ: 48 M/10 ರಲ್ಲಿ ಗುರುತು ಮಾಡಲಾಗಿತ್ತು.

ನವೀಕರಿಸಬಹುದಾದ ಇಂಧನ ನೀತಿ 2022-27 ರಲ್ಲಿ ಪವನ ವಿದ್ಯುತ್ ಯೋಜನೆಗಳ ಪ್ರತಿ ವಿಂಡ್ ಟರ್ಬೈನ್‌ಗೆ 4 ಎಕರೆಯಂತೆ ಜಮೀನಿನ ಪ್ರದೇಶವನ್ನು ಉಪಯೋಗಿಸಲು ತಿಳಿಸಲಾಗಿದೆ. ಅದರಂತೆ ದಿನಾಂಕ:25.11.2022ರ ಸರ್ಕಾರಿ ಆದೇಶದನ್ವಯ ಈಗಾಗಲೇ ಹೆಚ್ಚು ಜಮೀನು ಪ್ರದೇಶ ನೀಡಿರುವಂತಹ ಅನುಷ್ಠಾನಗೊಳ್ಳದ ಪವನ ವಿದ್ಯುತ್ ಯೋಜನೆಗಳ WTGs ಜಮೀನಿನ ಪ್ರದೇಶವನ್ನು ಪ್ರತೀ WTG ಗೆ 4 ಎಕರೆಯಂತೆ ಮಿತಿಗೊಳಿಸಿ Demarcation ಮಾಡಲು ಕೆ.ಆರ್.ಇ.ಡಿ.ಎಲ್. ನಿಯಮಿತಕ್ಕೆ ನಿರ್ದೇಶಿಸಲಾಗಿತ್ತು.

ಅದರಂತೆ M/s Vish Wind Infrastrukture LLP ಕಂಪನಿಗೆ ಗದಗ ಮತ್ತು ಧಾರವಾಡ ಜಿಲ್ಲೆಗಳ ವಿವಿಧ ಗ್ರಾಮಗಳಲ್ಲಿ ಹಂಚಿಕೆಯಾಗಿರುವ 50 ಮೆ.ವ್ಯಾ. ಮತ್ತು 6.4 ಮೆ.ವ್ಯಾ. ಸಾಮರ್ಥ್ಯದ ಪವನ ವಿದ್ಯುತ್ ಯೋಜನೆಯ ಅನುಷ್ಠಾನಕ್ಕೆ ನಿಗದಿಪಡಿಸಿರುವ ಜಮೀನಿನ ಪ್ರದೇಶವನ್ನು Demarcation ಆದೇಶದ ಪ್ರಕಾರ 4 Acres/WTG ಯಂತೆ ಪರಿಗಣಿಸಿ, ಅಳವಡಿಸುವ ವಿಂಡ್ ಟರ್ಬೈನ್‌ಗಳ ಅಕ್ಷಾಂಶ ಮತ್ತು ರೇಖಾಂಶಗಳನ್ನು 10 ದಿನಗಳ ಒಳಗಾಗಿ ನೀಡುವಂತೆ ಕೆ.ಆರ್.ಇ.ಡಿ.ಎಲ್. ವತಿಯಿಂದ ಅಭಿವೃದ್ಧಿದಾರರಿಗೆ ಸೂಚಿಸಲಾಗಿತ್ತು. ಸದರಿ 10 ದಿನಗಳ ಅವಧಿಯೊಳಗೆ ಮಾಹಿತ ಸಲ್ಲಿಸದಿದ್ದಲ್ಲಿ ಸರ್ಕಾರದ ಹಂಚಿಕೆ ಆದೇಶಗಳಲ್ಲಿ ನಮೂದಿಸಿರುವ ವಿಂಡ್ ಟರ್ಬೈನ್‌ಗಳಿಗೆ ಪ್ರತಿ ಟರ್ಬೈನ್‌ಗೆ 4 ಎಕರೆಯಂತೆ ಪರಿಗಣಿಸಲಾಗುವುದ ಎಂದು ತಿಳಿಸಲಾಗಿತ್ತು.

M/s Vish Wind Infrastrukture LLP ಕಂಪನಿಯು ಕೋವಿಡ್ 19ರ ಸಾಂಕ್ರಾಮಿಕ ರೋಗದ ಹಿನ್ನೆಲೆಯಲ್ಲಿ ದೇಶಾದ್ಯಂತ ಲಾಕ್‌ಡೌನ್ ಘೋಷಿಸಿದ ಪ್ರಯುಕ್ತ ಹಂಚಿಕೆಯಾಗಿರುವ ಯೋಜನೆಗಳ ಪ್ರಗತಿಯಲ್ಲಿ ಹಿನ್ನಡೆ ಉಂಟಾಗಿದೆ ಎಂದು ತಿಳಿಸಿ, ಆದಾಗ್ಯೂ ಯೋಜನೆಗಳಿಗೆ ಸಂಬಂಧಿಸಿದಂತೆ ವಿಂಡ್ ಮಾಸ್ಟ್‌ಗಳನ್ನು ಅಳವಡಿಸಿ, Wind Energy Potential ಇರುವ ಬಗ್ಗೆ ಅಧ್ಯಯನ Power Evacuation ಅಧ್ಯಯನ, Land Survey ಇನ್ನಿತರೆ ಕೆಲಸಗಳನ್ನು ಮಾಡಲಾಗುತ್ತಿದೆ ಎಂದು ತಿಳಿಸಿ, ಸದರಿ ಯೋಜನೆಗಳ ಸ್ಥಳದಲ್ಲಿ ಲಭ್ಯವಿರುವ ಸಾಮರ್ಥ್ಯವನ್ನು ಅನುಷ್ಠಾನಗೊಳಿಸುವ ನಿಟ್ಟಿನಲ್ಲಿ ಈಗಾಗಲೇ ಸಾಕಷ್ಟು ಹಣವನ್ನು ವಿನಿಯೋಗಿಸಿರುವುದರಿಂದ ಹಾಗೂ ಲಭ್ಯವಿರುವ ಸಾಮರ್ಥ್ಯಕ್ಕೆ ಡಿ.ಪಿ.ಆರ್. ಸಲ್ಲಿಸಲು 12-16 ವಾರಗಳ ಕಾಲಾವಕಾಶ ನೀಡುವಂತೆ ದಿನಾಂಕ:02.02.2023ರ ಪತ್ರದಲ್ಲಿ ಕೆ.ಆರ್.ಇ.ಡಿ.ಎಲ್. ನಿಯಮಿತವನ್ನು ಕೋರಿರುತ್ತಾರೆ.

ತದನಂತರ M/s Vish Wind Infrastrukture LLP ಕಂಪನಿಗೆ ಗದಗ ಜಿಲ್ಲೆಯ ವಿವಿಧ ಗ್ರಾಮಗಳಲ್ಲಿ ಹಂಚಿಕೆಯಾಗಿರುವ 50 ಮೆ.ವ್ಯಾ. ಸಾಮರ್ಥ್ಯದ ಪವನ ವಿದ್ಯುತ್ ಯೋಜನೆಯಲ್ಲಿ 2.1 ಮೆ.ವ್ಯಾ. ಸಾಮರ್ಥ್ಯವನ್ನು M/s Vaayu Renewable Energy (Krishna) Private Limited ಕಂಪನಿಗೆ ವರ್ಗಾಯಿಸಲು ಹಾಗೂ ವರ್ಗಾಯಿಸಿದ ಸಾಮರ್ಥ್ಯವನ್ನು 98.7 ಮೆ.ವ್ಯಾ. ಸಾಮರ್ಥ್ಯಕ್ಕೆ ಹೆಚ್ಚಿಸುವ ಹಾಗೂ ಕಂಪನಿಗೆ ಗದಗ ಮತ್ತು ಧಾರವಾಡ ಜಿಲ್ಲೆಗಳ ವಿವಿಧ ಗ್ರಾಮಗಳಲ್ಲಿ ಹಂಚಿಕೆಯಾಗಿರುವ 6.4 ಮೆ.ವ್ಯಾ. (8 ಸಂಖ್ಯೆಯ 0.8 ಮೆ.ವ್ಯಾ. ಸಾಮರ್ಥ್ಯದ ವಿಂಡ್ ಟರ್ಬೈನ್) ಸಾಮರ್ಥ್ಯದ ಪವನ ವಿದ್ಯುತ್ ಯೋಜನೆಯಲ್ಲಿ 2.1 ಮೆ.ವ್ಯಾ. ಸಾಮರ್ಥ್ಯವನ್ನು M/s Vaayu Renewable Energy (Mevasa) Private Limited ಕಂಪನಿಗೆ ವರ್ಗಾಯಿಸಲು ಹಾಗೂ ವರ್ಗಾಯಿಸಿದ ಸಾಮರ್ಥ್ಯವನ್ನು 96.6 ಮೆ.ವ್ಯಾ. ಸಾಮರ್ಥ್ಯಕ್ಕೆ ಹೆಚ್ಚಿಸುವ ಪ್ರಸ್ತಾವನೆಯನ್ನು ಸಲ್ಲಿಸಿ, ಸಂಬಂಧಿಸಿದ ಶುಲ್ಕವನ್ನು ಪಾವತಿಸಿ, ಸದರಿ ಸಾಮರ್ಥ್ಯಕ್ಕೆ ಅಳವಡಿಸುವ ವಿಂಡ್ ಟರ್ಬೈನ್‌ಗಳ ಅಕ್ಷಾಂಶ ಮತ್ತು ರೇಖಾಂಶಗಳನ್ನು ಸಲ್ಲಿಸಿರುತ್ತಾರೆ.

M/s FP Sun Spark Private Limited ಕಂಪನಿಯ 151.8 ಮೆ.ವ್ಯಾ. ಮತ್ತು M/s FPEL Trizone Solar Private Limited ಕಂಪನಿಯ 148.5 ಮೆ.ವ್ಯಾ. ಸಾಮರ್ಥ್ಯದ ಪ್ರಸ್ತಾವನೆಗಳು ಕೆ.ಆರ್.ಇ.ಡಿ.ಎಲ್. ನಿಯಮಿತಕ್ಕೆ ಸಲ್ಲಿಸಿದ ನಂತರ, M/s Vaayu Renewable Energy (Krishna) Private Limited ಕಂಪನಿಯ 98.7 ಮೆ.ವ್ಯಾ. ಸಾಮರ್ಥ್ಯ ಹೆಚ್ಚಳದ ಪ್ರಸ್ತಾವನೆ ಮತ್ತು M/s Vaayu Renewable Energy (Mevasa) Private Limited ಕಂಪನಿಯ 96.6 ಮೆ.ವ್ಯಾ. ಸಾಮರ್ಥ್ಯ ಹೆಚ್ಚಳದ ಪ್ರಸ್ತಾವನೆಗಳ ಅರ್ಜಿಗಳನ್ನು ಸಲ್ಲಿಸಿರುತ್ತಾರೆ.

ಆದರೆ ಸರ್ಕಾರವು ಹಂಚಿಕೆಗೆ ಸೀಮಿತವಾಗಿ ಜಮೀನಿನ ಪ್ರದೇಶವನ್ನು Demarcation ಮಾಡಲು ಕೆ.ಆರ್.ಇ.ಡಿ.ಎಲ್. ನಿಯಮಿತಕ್ಕೆ ಸೂಚಿಸಿರುವುದರಿಂದ ಹಾಗೂ M/s Vish Wind Infrastrukture LLP ಕಂಪನಿಗೆ ಹಂಚಿಕೆಯಾಗಿರುವ 50 ಮೆ.ವ್ಯಾ. ಮತ್ತು 6.4 ಮೆ.ವ್ಯಾ. ಸಾಮರ್ಥ್ಯದ M/s FPEL Trizone Solar Private Limited ಕಂಪನಿಯ 151.8 ಮೆ.ವ್ಯಾ. ಸಾಮರ್ಥ್ಯದ ಪ್ರಸ್ತಾವನೆಯು Overlap ಆಗುತ್ತಿರುವ ಸಂಬಂಧ ದಿನಾಂಕ:04.03.2023ರಂದು ನಡೆದ 6ನೇ ರಾಜ್ಯಮಟ್ಟದ ಹಂಚಿಕೆ ಸಮಿತಿಯಲ್ಲಿ ಮಂಡಿಸಲಾಗಿತ್ತು. ಸದರಿ ಸಭೆಯ ಕಾರ್ಯಸೂಚಿಯಲ್ಲಿ Overlapping ಪ್ರಕರಣಗಳಿಗೆ ಕೆ.ಆರ್.ಇ.ಡಿ.ಎಲ್. ನಿಯಮಿತದ ನಿರ್ಧಾರವೇ ಅಂತಿಮವಾಗಿರುತ್ತದೆ ಎಂದು ಸಮಿತಿಯು ಸರ್ವಾನುಮತದಿಂದ ನಿರ್ಣಯಿಸಲಾಯಿತು.